ದಿನಾಂಕ 27-07-2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದ.

ನನಗೆ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ. ವಾದಿ ನಮ್ಮ ಊರಿನವನು. ವಾದಿಗೆ ಒಟ್ಟು 3 ಜನ ಸಹೋದರರು ಇದ್ದಾರೆ. ಅವರು ಯಾರೆಂದರೆ ಹನುಮಂತ, ಫಕೀರಾ ಹಾಗೂ ಸಂಭಾಜಿ. ಈ ದಾವೆಯನ್ನು ವಾದಿಯು ಯಾವ ಸರ್ವೆ ನಂಬರ ಬಾಬ್ತು ಸಲ್ಲಿಸಿದ್ದಾರೆ ಎನ್ನುವುದು ಗೊತ್ತಿಲ್ಲ. ವಾದಿಯ ಸಹೋದರನಾದ ಹನುಮಂತನಿಗೆ ಎಷ್ಟು ಎಕರೆ ಜಮೀನು ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಊರಿಗೆ ಹೋಗುವ ರಸ್ತೆಯ ಬದಿಯಲ್ಲಿ ಇರುವ ತನ್ನ ಜಮೀನಿನಲ್ಲಿ ಹನುಮಂತನು ಎಷ್ಟು ಜನರಿಗೆ ತನ್ನ ಜಮೀನಿನ ಭಾಗವನ್ನು ಮಾರಾಟ ಮಾಡಿದ್ದಾನೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಮಾರಾಟ ಮಾಡಿದ್ದಾನೆ ಆದರೆ ಎಷ್ಟು ಜನರಿಗೆ ಎನ್ನುವುದು ತನಗೆ ಗೊತ್ತಿಲ್ಲ ಎನ್ನುತ್ತಾರೆ.

ನಮ್ಮ ಊರಿನ ನಾಗೇಂದ್ರ ಅಂಗಡಿ, ಪಾಂಡು ಬಡಗಿ, ನಾರಾಯಣ ಸೋನಾರ ಹಾಗೂ ಗೋಪಾಲ ಗೌಡ ಇವರೆಲ್ಲರೂ ಹನುಮಂತನ ಆಸ್ತಿಯಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ನಾಗೇಂದ್ರನ ಮನೆಯ ಚಾಂದಿ ಗೋಡೆಗೆ ತಾಗಿ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ನಾಗೇಂದ್ರ ಅಂಗಡಿ, ಪಾಂಡು ಬಡಗಿ, ನಾರಾಯಣ ಸೋನಾರ ಹಾಗೂ ಗೋಪಾಲ ಗೌಡ ರವರ ಮನೆಗಳು ಪೂರ್ವ ದಿಕ್ಕಿಗೆ ಮುಖ ಮಾಡಿ ಇರುತ್ತವೆ ಎಂದರೆ ಸರಿ. ಮೇಲೆ ಹೇಳಿದ ಖಾಲಿ ಜಾಗಕ್ಕೆ ತಾಗಿ ವಾದಿಯ ಮನೆ ಇರುತ್ತದೆ ಎಂದರೆ ಸರಿ. ಮೇಲೆ ಹೇಳಿದ ಖಾಲಿ ಜಾಗದ ಯಾವ ದಿಕ್ಕಿಗೆ ವಾದಿಯ ಮನೆ ಇರುತ್ತದೆ ಎಂದು ಕೇಳಲಾಗಿ ಸಾಕ್ಷಿಯು ಸ್ಪಷ್ಟವಾಗಿ ಯಾವುದೇ ದಿಕ್ಕನ್ನು ಹೇಳಲಿಲ್ಲ. ಮೇಲೆ ಹೇಳಿದ ಖಾಲಿ ಜಾಗಕ್ಕೆ ಪೂರ್ವ ಪಶ್ಚಿಮ ಹಾಗೂ ಉತ್ತರ ದಿಕ್ಷಿಣವಾಗಿ ರಸ್ತೆ ಇರುತ್ತದೆ ಎಂದರೆ ಸರಿ. ವಾದಿಯ ಮನೆಯು ಬಿ ಕೆ ಹಳ್ಳಿ- ಹಳಿಯಾಳ ಮುಖ್ಯ ರಸ್ತೆಯ ಕಡೆಗೆ ಮುಖಮಾಡಿ ಇರುತ್ತದೆ ಎಂದರೆ ಸರಿ. ವಾದಿಯ ಉಳಿದ ಜಮೀನು ಆತನ ಮನೆಯಿಂದ ಸದರಿ ಬಿ ಕೆ ಹಳ್ಳಿ- ಹಳಿಯಾಳ ಮುಖ್ಯ ರಸ್ತೆಯ ಬಾಜು ಅಂದರೆ ಹಳಿಯಾಳ ಕಡೆಗೆ ಮುಂದುವರೆದುಕೊಂಡು ಹೋಗಿರುತ್ತದೆ ಎಂದರೆ ಸರಿ. ಪ್ರತಿವಾದಿಯ ಆಸ್ತಿಯು ವಾದಿಯ ಜಮೀನಿನಲ್ಲಿ ಇರುವುದಿಲ್ಲ ಹಾಗೂ ಪ್ರತಿವಾದಿಯ ಸದರಿ ಆಸ್ತಿಯು ವಾದಿಯ ಸಹೋದರನಾದ ಹನುಮಂತನ ಕಡೆಯಿಂದ ಖರೀದಿ ಮಾಡಿದ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.